ಅನಿಸುವುದಿಲ್ಲ? ಮನೆಯಲ್ಲಿ ಒಂದು ಬಂದೂಕು ಇದ್ದಿದ್ದರೆ... ಎಂದು ದಿನವೂ ಅನೇಕ ಸಲ ಯೋಚಿಸುವವರಲ್ಲವೆ ನಾವು? ಕೈ ಎಟುಕುವಲ್ಲಿ ಬಂದೂಕನ್ನು ಇಟ್ಟರೆ ಏಕೆ ಅಪಾಯವೆನ್ನುವುದು? ತಲೆದಿಂಬಿನ ಕೆಳಗಿಟ್ಟರೆ ಏನಾಗಬಹುದು?

ಒಮ್ಮೆ ಬ್ಯಾಂಕ್‌ಗೆ ನನ್ನನ್ನು ಭೇಟಿಯಾಗಲು ವಾಯಿಲ್ ಜುಬ್ಬಾ ತೊಟ್ಟ ಒಬ್ಬ ಅಪರಿಚಿತ ಬಂದಿದ್ದ. ಅವನ ಅಂಗಿಯ ಒಳಗೆ ಪಿಸ್ತೂಲನ್ನು ಕಂಡಿದ್ದೆ. ಒಂದು ಸಂಜೆ ಸುಮ್ಮನೆ ನಾನು ನಡೆದುಹೋಗುತ್ತಿದ್ದೆ. ಅದೇ ವ್ಯಕ್ತಿ ಪಿಸ್ತೂಲು ತೆಗೆದು ಎಲ್ಲಿಗೋ ಯಾರಿಗೋ ಗುರಿಯಿಡುವುದನ್ನು ಕಂಡೆ. ಹಾಗೆ ನೋಡಿದರೆ ಆತನಿಗೆ ಗೂಂಡಾಗಳ ಎಲ್ಲಾ ಲಕ್ಷಣಗಳು ಇದ್ದವು. ಫ್ರೆಡ್ಡಿಯ ಸುಗಂಧ ಮತ್ತು ಅಂಕಲ್‌ನ ಮದ್ಯದ ಬ್ರಾಂಡ್‌ನ ಸಮ್ಮಿಶ್ರ ಗಂಧ ಅವನಿಂದ ಹೊರಹೊಮ್ಮುತ್ತಿತ್ತು. ನಿಧಾನವಾಗಿ ಅವನು ಪಿಸ್ತೂಲಿನ ನಳಿಗೆಯನ್ನು ನನ್ನತ್ತ ತಿರುಗಿಸಿ ಗುರಿಯಿಟ್ಟ. ಕ್ಯಾಮೆರಾ 'ಪ್ಯಾನ್' ಮಾಡುವಂತೆ ಅವನು ನಿಧಾನಕ್ಕೆ ಪಿಸ್ತೂಲನ್ನು ತಿರುಗಿಸಿದ. ಅದು ನನ್ನ ಎದೆಯ ನೇರಕ್ಕಿತ್ತು. ನನ್ನ ಎದೆ ಬಡಿತದ ಸದ್ದು ಕೇಳಿ ಹೆದರಿದವನಂತೆ ಅವನು ಅದನ್ನು ಬೇರೊಂದು ದಿಶೆಗೆ ತಿರುಗಿಸಿದ. ಸಿನಿಮಾದಲ್ಲಿ ಬರುವ ಖಳನಾಯಕನಂತೆ ನನಗೆ ಎಚ್ಚರಿಕೆ ಕೊಟ್ಟ.

'ನಾಯಿ ಮಗನೆ, ನಿನ್ನ ಜೀವ ಈಗ ನನ್ನ ಕೈಯಲ್ಲಿದೆ. ಕೇರ್ಫುಲ್ಲಾಗಿರು ಮಗನೆ'. ನನ್ನ ಭಯ ದುಪ್ಪಟ್ಟಾಯಿತು. ಇನ್ನು ಸುಮ್ಮನಿರಲಾಗದು. ನನ್ನ ಧೈರ್ಯ ಎಲ್ಲಾ ತಡೆಗಳನ್ನು ನುಚ್ಚುನೂರು ಮಾಡಿ ಎತ್ತೆತ್ತಲೋ ಹರಿಯುತ್ತಿದೆ. ಶ್ರೀದೇವಿಯ ಸಾಂತ್ವನದ ಮಾತುಗಳಿಗೆ ನನ್ನನ್ನು ಕಾಪಾಡಲು ಸಾಧ್ಯವಿಲ್ಲವೆಂದೆನಿಸಿತು. ನಾನಿಲ್ಲವೆಂದಾದರೂ ಶ್ರೀದೇವಿಯನ್ನು ಅವರು ರಕ್ಷಿಸುತ್ತಾರೆ. ಸುಂದರವಾದ ಹಸ್ತಾಕ್ಷರದಲ್ಲಿ ನಾನು ಶ್ರೀದೇವಿಗೆ ಒಂದು ಪತ್ರ ಬರೆದೆ... ಕಣ್ಣೀರಿನಲ್ಲಿ ತೋಯ್ದ ಒಂದು ಪತ್ರ...

ಅಧ್ಯಾಯ–11

ಮತ್ತೆ ನಾನು ಉದ್ಭವಿಸಿದ್ದು ಗಲ್ಫ್‌ನಲ್ಲಿ. ಇತರೆ ರಾಜಕೀಯ ನಾಯಕರುಗಳಂತೆ ಆಕಸ್ಮಿಕವಾಗಿ ನನಗೊಂದು ಪಾಸ್‌ಪೋರ್ಟ್ ಮಾಡಿಸಲು ಸಾಧ್ಯವಾಗಿತ್ತು. ತನ್ನ ಹಸ್ತರೇಖೆಯಲ್ಲಿ ಯಾವುದಾದರೂ ವಿದೇಶ ಪ್ರಯಾಣದ ಅದೃಷ್ಟವಿದ್ದರೆ, ತನ್ನ ಸಹಾಯಕನಾಗಿ ನನ್ನನ್ನೂ ಕರೆದುಕೊಂಡು ಹೋಗಬೇಕೆಂದು ಅಂದುಕೊಂಡಿದ್ದರೋ ಏನೋ. ಅದಕ್ಕಾಗಿಯೇ ಅಂಕಲ್ ನನ್ನ ಪಾಸ್‌ಪೋರ್ಟನ್ನು ಸಿದ್ಧಗೊಳಿಸಿದ್ದರು.

ಕಣ್ಣೀರಿನಲ್ಲಿ ತೊಯ್ದ ಪತ್ರಕ್ಕೆ ಬೆಲೆಬಾಳುವ ಒಂದು ಗೋಲ್ಡನ್ ಪೆನ್ನನ್ನು ಸಿಗಿಸಿ, ನಾನು ಮನೆಯಿಂದ ಇಳಿದಿದ್ದೆ. ಸ್ನಾನ ಮಾಡುವಾಗ ಬಚ್ಚಲು ಮನೆಯಲ್ಲಿ ಮರೆತು ಬಿಟ್ಟುಬಿಟ್ಟೆನೆಂದು ಅನುಮಾನಿಸುವಂತೆ ನಾನು ಮದುವೆಯ ಉಂಗುರವನ್ನು ಬಿಚ್ಚಿಟ್ಟಿದ್ದೆ. ಒಂದು ವೇಳೆ ನಾನು ತಿರುಗಿ ಬರದಿದ್ದರೆ?

ಕೈಯಲ್ಲಿ ಯಥೇಚ್ಛ ಹಣವಿದ್ದುದರಿಂದ ಟಿಕೆಟ್‌ರಹಿತ ಪ್ರಯಾಣದ ಅವಶ್ಯಕತೆಯಿರಲಿಲ್ಲ. ರೈಲಿನಲ್ಲಿಯೇ ಮುಂಬೈ ತಲುಪಿದೆ. ಸಾಕಷ್ಟು ಸಿನಿಮಾ, ಕಾದಂಬರಿಗಳ ಮೂಲಕ ನನಗೆ ಮುಂಬೈ ಚಿರಪರಿಚಿತ ನಗರ. ಕೈಯಲ್ಲಿ ಸಣ್ಣದೊಂದು ಚೀಲ ಮಾತ್ರವಿತ್ತು. ದಾದರಿನಲ್ಲಿ ರೈಲು ಇಳಿದೆ.

ಕಾದಂಬರಿ ಸಿನಿಮಾಗಳಲ್ಲಿ ಬರುವಂತೆ ಹಿಂದಿ ಮಾತನಾಡುವ ಮಲಯಾಳಿ ಟ್ಯಾಕ್ಸಿ ಡ್ರೈವರನೊಬ್ಬ ಸಿಕ್ಕಿದ. ಆತ ನನಗೆ ಸಹಾಯಮಾಡುವವನಂತೆ ಮಾತನಾಡಿದ. ತಕ್ಷಣ ನಾನು ಎಚ್ಚರಗೊಂಡೆ. ಕೆಲವೇ ಕ್ಷಣಗಳಲ್ಲಿ ಅವನ ಬಲೆಗೆ ನಾನು ಬೀಳುವುದಿಲ್ಲವೆಂದು, ನಾನೊಬ್ಬ ಪಳಗಿದ ಬೀಜವೆಂದು ಅವನ ಅರಿವಿಗೆ ಬಂತು. ಅಷ್ಟಕ್ಕೇ ಅವನು ಸೋತವನಂತೆ ಕಂಡ. ಅದರ ತರುವಾಯ ಅವನು ಗೆಳೆಯನಾದ, ಮಾರ್ಗದರ್ಶಿಯಾದ. ಕೊನೆಯಲ್ಲಿ ನನಗೆ ವೀಸಾ ಲಭಿಸುವ ದಾರಿಯನ್ನೂ ಹೇಳಿಕೊಟ್ಟ.

ಅರ್ನಾಲ್ಡ್ ಮೇಸನ್ ಟ್ರಾವೆಲ್ ಏಜೆನ್ಸಿಯವರು ನನ್ನನ್ನು ಕಳುಹಿಸಿದ್ದು ಕುವೈತ್‌ಗೆ. ಅದೇ ಮೊದಲು ನಾನು ವಿಮಾನವೇರಿದ್ದು. ದ್ವೇಷ, ಅಸೂಯೆ, ಹೊಡೆದಾಟಗಳ ಮಹಾಕೂಪದಿಂದ ತಪ್ಪಿಸಿಕೊಂಡು ಹೋಗಲು ನನಗೆ ಬೇರೆ ದಾರಿಯೇ ಇರಲಿಲ್ಲ.

ಸೀಟ್ ಬೆಲ್ಟ್ ಧರಿಸುವುದು ಹೇಗೆಂದು ಸುಂದರಿಯಾದ ಗಗನ ಸಖಿ ಹೇಳಿಕೊಟ್ಟಳು. ಸಂಪ್ರದಾಯವೆಂಬಂತೆ ಭಾಸವಾಗುವ ಕಲಿತ ಪಾಠಗಳ ನಿರ್ಜೀವ ಪುನರಾವರ್ತನೆ. ಮೆಡಿಕಲ್ ರೆಪ್ರೆಸೆಂಟೇಟಿವ್‌ಗಳು ವಿವರಣೆಗಳನ್ನು ನೀಡುವ ಶೈಲಿ ಜ್ಞಾಪಕವಾಯಿತು. ವಿಮಾನ ರನ್‌ವೇಯಿಂದ ಎತ್ತರಕ್ಕೇರಿದಾಗ ಕುತೂಹಲವೆನಿಸಿತು. ಹಸಿರು ದಡ, ನೀಲಿ ಕಡಲಿನೆಂದೆಲ್ಲಾ ದೂರವಾಗಿ ವಿಮಾನ ಮೇಘದ ಹಾದಿಯನ್ನು ತಲುಪಿತು. ನನ್ನ ಸೀಟು ಕಿಟಕಿಯ ಬಳಿಯಲ್ಲಿಯೇ.

ವಿಮಾನ ಎತ್ತರಕ್ಕೇರಿದಂತೆ ಸುತ್ತಲೂ ನೀಲಾಕಾಶ. ಅಪಾರ ಸುಂದರ ಎಂಬ ಕವಿವಾಕ್ಯ. ಅರ್ಥಶೂನ್ಯ, ಅದು ಅಪಾರ ಭೀಕರ. ಮೃತಿಯ ವಿಸ್ಮೃತಿ ನೀಲಿಯ ಬದುಕಿನಿಂದ ಮತ್ತೊಂದು ಬದುಕನ್ನು ಅರಸುತ್ತಾ ಹೊರಟ ಯಾನ. ಹಾದಿಯ ಅಕ್ಕಪಕ್ಕದ ಆಕರ್ಷಣೆ ಇಲ್ಲದೆ, ವಿಮಾನ ಯಾನ ಒಂದು ಪ್ರಯಾಣವೇ ಅಲ್ಲವೆನಿಸಿತು. ಜೋಮುಗಟ್ಟಿದ ಸಮಯ.

ಊಳಿಡುವ ಒಂಟಿ ಸಲಗದಂತೆ ಕೆಲವು ಮೇಘದ ತುಣುಕುಗಳು ಎದುರಾದಾಗ ತೇಲುವಾದ ಜೀವನ ಸೂಚನೆ ಲಭಿಸಿತು. ಅನಂತರ ಅದೂ ದೂರವಾಯಿತು. ಸರ್ಕಸ್ಸಿನ ಇಬ್ಭಾಗವಾದ ಅರ್ಧಗೋಲದ ಸರಿ ಮಧ್ಯೆಯಿಂದ ಒಂದು ಸೂಜಿಯಂತೆ ವಿಮಾನ ಸಂಚರಿಸಿತು. ಸುತ್ತುತ್ತಿರುವ ಪ್ರೊಫೆಲ್ಲರ್ ಮಾತ್ರವಾಗಿತ್ತು. ವಿಮಾನ ಹಾರುತ್ತಿರುವುದರ ಸೂಚನೆ.

ವಿಮಾನಯಾನದಲ್ಲಿ ಓದಲಿಕ್ಕೆ ಅಥವಾ ನಿದ್ರಿಸುವುದಕ್ಕೆ ಮಾತ್ರ ಸಾಧ್ಯ. ಓದುವುದಕ್ಕೆ ಪುಸ್ತಕಗಳೇನೂ ಇರಲಿಲ್ಲ. ಆದ್ದರಿಂದ ನಾನು ನಿದ್ರಿಸಲು ತಯಾರಾದೆ. ಬಿಳಿಚಿ ಬೆಳ್ಳಗಾಗಿರುವ, ತುಟಿಗೆ ರೂಢಿಗಿಂತಲೂ ತುಸು ಹೆಚ್ಚಿಗೆ ಬಣ್ಣ ಹಚ್ಚಿದ ಗಗನಸಖಿ ನೀಡಿದ ಸ್ಯಾಂಡ್‌ವಿಚ್ ಅನ್ನು ನಯವಾಗಿ ತಿರಸ್ಕರಿಸಿ ಕಣ್ಣುಗಳನ್ನು ಮುಚ್ಚಿದೆ.

ಕನಸಿನಲ್ಲಿ ಏನು ಕಂಡೆನೆಂಬುದು ನೆನಪಿಲ್ಲ. ಎಚ್ಚರಗೊಂಡಾಗ ಮತ್ತೆ ಸುತ್ತಲೂ ನೀಲಿ ಬಣ್ಣ ಹಚ್ಚಿದ ಅಗಾಧತೆ. ಆದರೆ ಅದು ಹೆಚ್ಚು ಕಾಲ ಉಳಿಯಲಿಲ್ಲ. ಆಕಾಶದ ತಳಭಾಗದಲ್ಲಿ ಬಿರುಕೊಂದು ಕಾಣಿಸಿತು. ಒಂದು ಜೆಟ್‌ವಿಮಾನ ಹಾದುಹೋದುದರ ಅವಶೇಷದಂತೆ ಒಂದು ಬಿಳಿಯ ಗೆರೆ! ಕಡಲು ಮತ್ತು ದಂಡೆ ಒಂದಕ್ಕೊಂದು ಸ್ಪರ್ಶಿಸುವಂತಹ ಸೀಮಾರೇಖೆಯಾಗಿ ಅದು ಬದಲಾಯಿತು. ಪುನಃ ಒಂದು ಕರೆ... ಭೂಮಿಯತ್ತ.

ಕುವೈಟ್ ಏರ್‌ಪೋರ್ಟ್‌ನಲ್ಲಿ ಮಲಯಾಳಿಯಾದ ಒಬ್ಬ ಟ್ಯಾಕ್ಸಿ ಡ್ರೈವರ್ ನನಗಾಗಿ ಕಾಯುತ್ತಿದ್ದ. ಅವನ ಹೆಸರು ಮಜೀದ್. 750 ಕುವೈಟ್ ದೀನಾರ್ ಸಂಬಳದ ಉದ್ಯೋಗಕ್ಕೆ ಮಜೀದ್ ನನ್ನನ್ನು ಕರೆದೊಯ್ದ.

ಬ್ಯಾಂಕ್‌ನಲ್ಲಿ ತರಬೇತಿ ಪಡೆದಿದ್ದು ಈಗ ಉಪಯೋಗಕ್ಕೆ ಬಂತು. ಮುಂಬೈ ಟ್ಯಾಕ್ಸಿಯವನಿಗೆ ಮೊದಲ ಸಂಬಳದಲ್ಲೇ 5000 ರೂಪಾಯಿ ಭಾರತೀಯ ಹಣವನ್ನು ಕಳುಹಿಸಿಕೊಟ್ಟು, ಅವನೊಂದಿಗಿನ ಸಂಬಂಧವನ್ನು ಕತ್ತರಿಸಿಕೊಂಡೆ. ಎರಡು ಮೂರು ಸಲ ಕೃತಜ್ಞತೆ ಸಲ್ಲಿಸಲು ಅವನು ಫೋನಾಯಿಸಿರಬೇಕು. ಆದರೆ ನಾನು ಆ ಕಾಲ್‌ಗಳನ್ನು ಬೇಕೆಂದೇ ಸ್ವೀಕರಿಸಲಿಲ್ಲ.

750 ಕೆ.ಡಿ. ಆ ಕಾಲದಲ್ಲಿ ಒಳ್ಳೆಯ ಸಂಬಳವಾಗಿತ್ತು. ಒಂದು ಡಿಪಾರ್ಟ್‌ಮೆಂಟ್ ಸ್ಟೋರಿನ ಲೆಕ್ಕಪತ್ರಗಳನ್ನು ನಿರ್ವಹಿಸುವುದು ನನ್ನ ಕೆಲಸ. ಒಳ್ಳೆಯ ಹಸ್ತಾಕ್ಷರವೆಂಬಂತೆ ಲೆಕ್ಕಪತ್ರಗಳನ್ನು ವಿದಗ್ಧವಾಗಿ ನಿಭಾಯಿಸಿದೆ. ಒಂದು ಕೆ.ಡಿ.ಗೆ 60 ಭಾರತೀಯ ರೂಪಾಯಿ ಸಿಗುತ್ತಿತ್ತು. ಕಿಚನ್, ಬಾತ್‌ರೂಂ ಸೇರಿದ ಒಂದು ಕೋಣೆ ನನಗೆ ದೊರೆಯಿತು. ಎ.ಸಿ., ಫ್ರಿಜ್, ಟಿ.ವಿ. ವಿ.ಸಿ.ಆರ್. ಎಲ್ಲವೂ ಇದ್ದವು. ಕೆಲವೇ ದಿನಗಳಲ್ಲಿ ಒಬ್ಬ ಸರಾಸರಿ ಗಲ್ಫ್‌ನವನ ಕನಸುಗಳನ್ನು ನಾನು ನನಸಾಗಿಸಿದೆ. ಊರಿಂದ ಆಮದು ಮಾಡಿಕೊಳ್ಳುವ ಮಸಾಲೆ ಹಪ್ಪಳ, ಮಾದಕ ಸಿನಿಮಾ ಮಾಸ ಪತ್ರಿಕೆಗಳು, ನೀಲಿ ಚಿತ್ರಗಳು ಮುಂತಾದವುಗಳಿಂದ ನನ್ನ ದಾಹವನ್ನು ಇಂಗಿಸಲು ಸಾಧ್ಯವಾಯಿತು. ಸಿಗುವ ಸಂಬಳದಲ್ಲಿ ಉಳಿಸುವ ಆಸಕ್ತಿ ನನಗಿರಲಿಲ್ಲ. ಲೋನ್ ತೆಗೆದು ಒಂದು ಟೊಯಾಟೊ ಕಾರು ಕೊಂಡೆ. ನಿಧಾನಕ್ಕೆ ನನ್ನ ಬ್ಯಾಂಕ್ ಬ್ಯಾಲೆನ್ಸ್ ವರ್ಧಿಸತೊಡಗಿತು. ಆಗಲೂ ಮಾಸದ ನೋವಿನಂತೆ ಸುಮಿತ್ರಾ ಮತ್ತು ಶ್ರೀದೇವಿಯರು ನನ್ನ ಎದೆಯ ಇಕ್ಕೆಲಗಳಲ್ಲಿ ನೆಲೆಯೂರಿದ್ದರು.

ಚಳಿಯಿರುವ ರಾತ್ರಿ ನಿದ್ರಿಸಲು ಮಲಗಿದರೆ ಇಬ್ಬರೂ ಎದೆಯಿಂದ ಇಳಿದು ಬರುತ್ತಿದ್ದರು. ಮುಖ ಊದಿಸಿಕೊಂಡು ಪರಸ್ಪರ ದುರುಗುಟ್ಟಿ ನೋಡಿಕೊಳ್ಳುತ್ತಿದ್ದರು. ಪ್ರಿಯತಮೆಯನ್ನು ಕಡೆಗಣಿಸುವ ಪ್ರಿಯತಮನನ್ನು ಅಭಿನಂದಿಸುವ ಜಗತ್ತು, ಹೆಂಡತಿಯನ್ನು ನಿರ್ಲಕ್ಷಿಸುವ ಗಂಡನನ್ನು ಕ್ಷಮಿಸಲಾರದು. ಕಣ್ಣು ತೆರೆದು ಅವರಿಬ್ಬರನ್ನು ಕತ್ತಲೆಯ ಕೂಪಕ್ಕೆ ತಳ್ಳಿ ಪುನಃ ಕಣ್ಣುಗಳನ್ನು ಮುಚ್ಚುತ್ತೇನೆ. ಅದಕ್ಕೆ ಬದಲಾಗಿ ಸಿನಿಮಾದ ಮಾದಕ ರೂಪಗಳನ್ನು ಕೂರಿಸಲು